154ನೆ ಕ್ರ ನಿ=330 = 6
4
03

**ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಎಸ್ ಎಲ್.ಭೋಜೆಗೌಡ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಸೂಚನೆ:**

"ಕರ್ನಾಟಕ ಲೋಕಸೇವಾ ಆಯೋಗವು ಕಳೆದ ಒಂದೂವರೆ ವರ್ಷದಿಂದ ಸುಮಾರು 200 ವಿವಿಧ ವೃಂದಗಳ ಹುದ್ದೆಗಳ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುತ್ತಾ ಬಂದಿರುತ್ತದೆ. ಸದರಿ ಹೆಚ್ಚುವರಿ ಪಟ್ಟಿಗಳ ಮೂಲ ಅಧಿಸೂಚನೆ ಮತ್ತು ಆಯ್ಕೆ ಪಟ್ಟಿ ಹಾಗೂ ಈಗಿನ ಹೆಚ್ಚುವರಿ ಪಟ್ಟಿಗಳನ್ನು ನೋಡಿದಾಗ ನೇಮಕಾತಿ ಪ್ರಕ್ರಿಯೆಯ ಮೊದಲನೆ ಆಯ್ಕೆ ಪಟ್ಟಿಗೂ ಹಾಗೂ ಆಗ ಹೆಚ್ಚುವರಿ ಪಟ್ಟಿಗಳಿಗೂ ಸುಮಾರು 6-8 ವರ್ಷಗಳ ವ್ಯತ್ಯಾಸಗಳು ಇರುತ್ತದೆ.

ಕರ್ನಾಟಕ ನಾಗರಿಕ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಾಮವಳಿ 2006 ರ ನಿಯಮ 8 ರಲ್ಲಿ ಮುಖ್ಯ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಆಯ್ಕೆ ಪ್ರಾಧಿಕಾರವೂ ಏಕ ಕಾಲದಲ್ಲಿಯೇ ಪ್ರಕಟಿಸಬೇಕಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 76 ಸೆನೆನಿ 2019 ದಿನಾಂಕ:15/02/2018 ರ ಅನ್ವಯ ಆಯ್ಕೆ ಪಟ್ಟಿಯು ಜಾರಿಯಲ್ಲಿ ಇರುವ ಅವಧಿಯೂ 01 ವರ್ಷವಾಗಿದ್ದು ನೇಮಕಾತಿ ಪ್ರಾಧಿಕಾರವೂ ನೇಮಕಾತಿ ಆದೇಶವನ್ನು ಆಯ್ಕೆ ಪಟ್ಟಿ ಪ್ರಕಟಗೊಂಡ 01 ವರ್ಷದೊಳಗಾಗಿ ನೀಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ರೀತಿ ಕ್ರಮ ಅನುಸರಿಸಿಲ್ಲವಾದ್ದರಿಂದ ಅವಧಿಯನ್ನು ವಿಸ್ತರಿಸಿ ನೇಮಕಾತಿ ಪ್ರಕ್ರಿಯೆಗಳನ್ನು ಮುಂದುವರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಅಭಿಪ್ರಾಯಿಸಿರುತ್ತದೆ. ಕೆ.ಪಿ.ಎಸ್.ಸಿ. ಆಯೋಗವು ಯಾವ ನಿಯಮದ ಮೇಲೆ ಈ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ? ಇದರ ಸಂಬಂಧ ಸಾರ್ವಜನಿಕ ಆಕ್ಷೇಪಣೆಗಳು ಸ್ವೀಕೃತವಾಗಿದ್ದಲ್ಲಿ ಅವುಗಳಿಗೆ ನೀಡಿದ ವಿವರಣೆ ಒಳಗೊಂಡಂತೆ ಇದಕ್ಕೆ ಸ್ಪಷ್ಟೀಕರಣ ನೀಡುತ್ತಾ ಸಾರ್ವಜನಿಕರಿಗೆ ಈ ಹೆಚ್ಚುವರಿ ಪಟ್ಟಿಗಳ ಬಗ್ಗೆ ನ್ಯಾಯ ಒದಗಿಸಬೇಕೆಂದು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ."

**ಉತ್ತರ:**

ಕರ್ನಾಟಕ ಲೋಕ ಸೇವಾ ಆಯೋಗವು ರಾಜ್ಯದ ವಿವಿಧ ಇಲಾಖೆಗಳ ನಾಗರಿಕ ಸೇವೆಯ ವಿವಿಧ ವೃಂದದ ಹುದ್ದೆಗಳಿಗೆ ನೇಮಕಾತಿಯನ್ನು ನಡೆಸುತ್ತಿದ್ದು, ವಿವಿಧ ಹುದ್ದೆಗಳಿಗೆ ಪ್ರತ್ಯೇಕವಾದ ನಿಯಮಗಳ ಮೇರೆಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿದೆ. ಸದರಿ ನಿಯಮಗಳಲ್ಲಿಯೇ ಅಂತಿಮ ಪಟ್ಟಿ ಹಾಗೂ ಹೆಚ್ಚುವರಿ ಪಟ್ಟಿ ತಯಾರಿಸುವ ಪ್ರಮಾಣ ಮತ್ತು ಚಾಲ್ತಿಯ ಅವಧಿಯ ಬಗ್ಗೆ ಅವಕಾಶ ಕಲ್ಪಿಸಲಾಗಿರುತ್ತದೆ (ಗೆಜೆಟೆಡ್ ಪ್ರೊಬೆಷನರ್ಸ್ ಹಾಗೂ ಕೆಲವು ಹುದ್ದೆಗಳಿಗೆ ಹೆಚ್ಚುವರಿ ಪಟ್ಟಿಯನ್ನು ತಯಾರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ).

ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರ ತಿದ್ದುಪಡಿ ನಿಯಮ 2015ರಲ್ಲಿ ಹೆಚ್ಚುವರಿ ಪಟ್ಟಿಗೆ ಸಂಬಂಧಿಸಿದಂತೆ ಉಪಬಂಧಿಸಲಾಗಿದ್ದು, ನಿಯಮ (8) ಉಪ ನಿಯಮ (3) ರಲ್ಲಿ ಅಂತಿಮ ಆಯ್ಕೆಪಟ್ಟಿಯು ಅದರ ಪ್ರಕಟಣೆ ದಿನಾಂಕದಿಂದ ಒಂದು ವರ್ಷಗಳ ವರೆಗೆ ಚಾಲ್ತಿಯಲ್ಲಿರುತ್ತದೆಂದು ಹಾಗೂ ನಿಯಮ (8) ಉಪ ನಿಯಮ (4) ರಲ್ಲಿ ಅಂತಿಮ ಆಯ್ಕೆಪಟ್ಟಿಯೊಂದಿಗೆ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ ಒಂದೂವರೆ ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆಂದು ಉಪಬಂಧಿಸಲಾಗಿದೆ.

2006ರ ನಿಯಮಗಳಲ್ಲಿ ನಿಗಧಿಪಡಿಸಿರುವ ಹೆಚ್ಚುವರಿ ಪಟ್ಟಿಯು ಕೇವಲ ಕಾಯ್ದಿರಿಸಿದ ಪಟ್ಟಿಯಾಗಿದ್ದು (Waiting list), ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳ ಬದಲಿಗೆ ಅದೇ ಮೀಸಲಾತಿಯ ಪ್ರವರ್ಗಗಳ ಅಭ್ಯರ್ಥಿಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಮಾತ್ರ ಆಯ್ಕೆಮಾಡಲು ಅವಕಾಶವಿದ್ದು, ಈಗಾಗಲೇ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಲ್ಲಿ ಎಲ್ಲಾ ಅಭ್ಯರ್ಥಿಗಳು ಆಯ್ಕೆಯಾಗಲು ಸಾಧ್ಯವಿರುವುದಿಲ್ಲ. ನಿಯಮದಲ್ಲಿ ಕರ್ತವ್ಯಕ್ಕೆ ಹಾಜರಾಗದ ಅಭ್ಯರ್ಥಿಗಳ ಬದಲಿಗೆ ಹೆಚ್ಚುವರಿ ಪಟ್ಟಿಯಿಂದ

ಅಭ್ಯರ್ಥಿಗಳನ್ನು ಆಯ್ಕೆಮಾಡಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಮಾತ್ರ ಜಾರಿಗೊಳಿಸಲು ಅವಕಾಶವಿದ್ದು, ಈಗಾಗಲೇ ಹೆಚ್ಚುವರಿ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಸ್ಥಾನಪಡೆದು ಉದ್ಯೋಗ ಪಡೆದುಕೊಳ್ಳುವ ಉದ್ದೇಶದಿಂದ ಹೆಚ್ಚುವರಿ ಪಟ್ಟಿಯ ಬಿಡುಗಡೆಯ ಅವಕಾಶವನ್ನು ದುರುಪಯೋಗಪಡಿಸಿಕೊಂಡಿರುವುದು/ ಪ್ರಯತ್ನಿಸಿರುವುದು ಕರ್ನಾಟಕ ಲೋಕಸೇವಾ ಆಯೋಗದ ಗಮನಕ್ಕೆ ಬಂದಿರುವುದರಿಂದ ಆಯೋಗವು ದಿನಾಂಕ: 14.02.2017ರ ಸಭೆಯಲ್ಲಿ ಹೆಚ್ಚುವರಿ ಪಟ್ಟಿಯನ್ನು ಬಿಡುಗಡೆಗೊಳಿಸದೆ, ಆಯ್ಕೆ ಪ್ರಾಧಿಕಾರದಿಂದ ನಮೂನೆ-7ರಲ್ಲಿ ಕರ್ತವ್ಯಕ್ಕೆ ಹಾಜರಾಗದ ಅಭ್ಯರ್ಥಿಗಳ ವಿವರಗಳನ್ನು ಒದಗಿಸಿದ ನಂತರ ನೇರವಾಗಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಬಿಡುಗಡೆಗೊಳಿಸುವಂತೆ ತೀರ್ಮಾನಿಸಿರುತ್ತದೆ. ಮುಂದುವರೆದು, ನಿಯಮಾನುಸಾರ ಮುಖ್ಯ ಪಟ್ಟಿಯ ಜೊತೆಗೆ ಏಕಕಾಲದಲ್ಲಿ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ಎಲ್ಲಾ ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನೆಯನ್ನು ನಡೆಸಬೇಕಿರುವ ಕಾರಣ ಅಂತಿಮ ಆಯ್ಕೆಪಟ್ಟಿಯ ಸಿದ್ಧಪಡಿಸುವಿಕೆ ಮತ್ತು ಪ್ರಕಟಣೆಯಲ್ಲಿ ವಿಳಂಬವಾಗುವುದನ್ನು ಗಮನಿಸಿದ ಆಯೋಗವು ನಿಯಮಾನುಸಾರ ಮುಖ್ಯಪಟ್ಟಿ ಹಾಗೂ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸುವ ಪ್ರಕ್ರಿಯೆಯನ್ನು ಕೈಬಿಟ್ಟಿರುವುದಾಗಿ ತೀರ್ಮಾನಿಸಿರುತ್ತದೆ.

ಮುಂದುವರೆದು, ಕೋವಿಡ್-19 ಹಾಗೂ ಲಾಕ್‌ಡೌನ್ ಕಾರಣದಿಂದಾಗಿ ಸರ್ಕಾರವು ಆರ್ಥಿಕ ಮಿತವ್ಯಯವನ್ನು ಸಾಧಿಸಲು ನೇಮಕಾತಿ ಪ್ರಕ್ರಿಯೆಗಳನ್ನು ನಿರ್ಬಂಧಿಸಿದ್ದ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಅಂತಿಮ ಆಯ್ಕೆಪಟ್ಟಿಗಳ ನೇಮಕಾತಿ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಗಳು ಸಕಾಲದಲ್ಲಿ ನಮೂನೆ-7ನ್ನು ಸಲ್ಲಿಸಲು ವಿಫಲವಾದ ಕಾರಣದಿಂದಾಗಿ, ಸಕಾಲದಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶ ನೀಡಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯ ಅವಧಿಯನ್ನು ನಿಯಮಗಳನ್ನು ಸಡಿಲಿಸಿ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 50 ಸೇನಿಬಿ 2022 ದಿನಾಂಕ: 29.10.2022 ರಲ್ಲಿ ಆದೇಶಿಸಲಾಗಿರುತ್ತದೆ. ಇದಲ್ಲದೇ, ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ನ್ನು ನಿರಸನಗೊಳಿಸಿ, ಪ್ರಸ್ತುತ, ಕರ್ನಾಟಕ ಸಿವಿಲ್ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ನ್ನು ಜಾರಿಗೊಳಿಸಲಾಗಿರುತ್ತದೆ.

ಹೀಗಾಗಿ ಕೋವಿಡ್-19 ಮತ್ತ ಲಾಕ್‌ಡೌನ್ ಅವಧಿಯಲ್ಲಿ ನೇಮಕಾತಿ ಆದೇಶಗಳನ್ನು ನೀಡಲು ನಿರ್ಬಂಧ ವಿಧಿಸಿದ್ದು ಹಾಗೂ ನ್ಯಾಯಾಲಯ ಪ್ರಕರಣಗಳಿಂದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವಲ್ಲಿ ವಿಳಂಬವಾಗಿದ್ದರಿಂದ ನೇಮಕಾತಿ ಪ್ರಾಧಿಕಾರಗಳು ನಮೂನೆ-7ರಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಗೆ ಸಕಾಲದಲ್ಲಿ ಪ್ರಸ್ತಾವನೆ ಸಲ್ಲಿಸದೆ ಇರುವ ಕಾರಣ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ವಿಳಂಬವಾಗಿರುತ್ತದೆ.

**ಸಂಖ್ಯೆ:ಸಿಆಸುಇ 87 ಸೇವನೆ 2024**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ